ಗುತ್ತಿಗೆದಾರರಿಗೆ ಕಾಮಗಾರಿ

106 (56)

ಶ್ರೀ ಶಾಮನೂರು ಶಿವಶಂಕರಪ್ಪ.ಎಸ್. (ದಾವಣಗೆರೆ–ದಕ್ಷಿಣ)

ಅ) ದಾವಣಗೆರೆ ಜಿಲ್ಲೆ ಹೊನ್ನಾಳಿ ತಾಲ್ಲೂಕಿನಲ್ಲಿ ಸಮಾಜ ಕಲ್ಯಾಣ ಇಲಾಖೆಯಡಿಯಲ್ಲಿನ ಕಾಮಗಾರಿಗಳನ್ನು ನಿರ್ವಹಿಸಿದ ಗುತ್ತಿಗೆದಾರರು ಯಾರು ಯಾರು? (ವಿವರ ನೀಡುವುದು)

ಆ) ಇವರು ಕೈಗೊಂಡ ಕಾಮಗಾರಿಗಳಲ್ಲಿ ನಿರ್ಮಾಣವಾದ ಕೊಳವೆಬಾವಿಗಳು ಎಷ್ಟು? (ವಿವರ ನೀಡುವುದು)

ಇ) ಇವುಗಳಲ್ಲಿ ಎಷ್ಟು ಕೊಳವೆಬಾವಿಗಳಿಗೆ ಮೋಟಾರ್ ಅಳವಡಿಸಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ?

ಈ) ಈ ಗುತ್ತಿಗೆದಾರರು ಸಮಾಜ ಕಲ್ಯಾಣ ಇಲಾಖೆಯ ವಿವಿದ ನಿಗಮಗಳ ಅಡಿ ಕೈಗೊಂಡ ಕಾಮಗಾರಿಗಳು ಎಷ್ಟು?(ವಿವರ ನೀಡುವುದು)

ಶ್ರೀ ಎ.ನಾರಾಯಣ ಸ್ವಾಮಿ (ಮಾನ್ಯ ಸಮಾಜ ಕಲ್ಯಾಣ ಬಂಧೀಖಾನೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

<u>ಅ) ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು:</u>

ಗಂಗಾ ಕಲ್ಯಾಣ ಯೋಜನೆಯಡಿ 2011–12ನೇ ಸಾಲಿನಲ್ಲಿ ಮೆ: ವೆಂಕಟೇಶ್ವರ ಟ್ಯೂಬ್‌ವೆಲ್ಸ್, ಪರಶುರಾಂಪುರ, ಚಳ್ಳಕೆರೆ ತಾಲ್ಲೂಕು ಇವರು ಕೊಳವೆಬಾವಿ ಕೊರೆಯುವ ಗುತ್ತಿಗೆದಾರರಾಗಿರುತ್ತಾರೆ. ಇದೇ ರೀತಿ ಸಬ್‌ಮರ್ಸಿಬಲ್ ಪಂಪ್‌ಸೆಟ್ ಮತ್ತು ಪೂರಕ ಸಾಮಗ್ರಿಗಳ ಸರಬರಾಜು ಕಾಮಗಾರಿಗೆ ಶ್ರೀ ಅರಿಹಂತ್ ಸಬ್‌ಮರ್ಸಿಬಲ್ ಪಂಪ್ಸ್, ಬೆಂಗಳೂರು ರವರು ಗುತ್ತಿಗೆದಾರರಾಗಿರುತ್ತಾರೆ.

<u>ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಬೆಂಗಳೂರು:</u>

2009–10 ನೇ ಸಾಲಿನಲ್ಲಿ ಮೆ:ಕೆ.ಪಿ.ಎಂ. ಬೋರ್‌ವೆಲ್ಸ್ ಹಾಗೂ 2010–11 ಮತ್ತು 2011–12ನೇ ಸಾಲಿಗೆ ಮೆ: ವೆಂಕಟೇಶ್ವರ ಟ್ಯೂಬ್‌ವೆಲ್ಸ್, ಪರಶುರಾಂಪುರ, ಚಳ್ಳಕೆರೆ ತಾಲ್ಲೂಕು ಇವರು ಕೊಳವೆಬಾವಿ ಕೊರೆಯುವ

ಮತ್ತು ಪಂಪ್‌ಸೆಟ್ ಮತ್ತು ಪೂರಕ ಸಾಮಗ್ರಿಗಳ ಸರಬರಾಜು ಕಾಮಗಾರಿಗೆ ಗುತ್ತಿಗೆದಾರರಾಗಿರುತ್ತಾರೆ.

ಆ) ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು:

ಮೆ: ವೆಂಕಟೇಶ್ವರ ಟ್ಯೂಬ್‌ವೆಲ್ಸ್, ಗುತ್ತಿಗೆದಾರರು 2011–12ನೇ ಸಾಲಿನ ಗುರಿಯಲ್ಲಿ 24 ಕೊಳವೆಬಾವಿ ಕೊರೆದಿರುತ್ತಾರೆ. (ಅನುಬಂಧ–1 ರಲ್ಲಿ ನೀಡಲಾಗಿದೆ)

ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಬೆಂಗಳೂರು:

2009 ರಿಂದ 2012ನೇ ಸಾಲಿನವರೆಗೆ ಒಟ್ಟು 44 ಕೊಳವೆಬಾವಿಗಳನ್ನು ಕೊರೆದಿರುತ್ತಾರೆ. (ಅನುಬಂಧ–2 ರಲ್ಲಿ ನೀಡಲಾಗಿದೆ)

ಇ) **ಈ) ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು:**

ಕೊಳವೆಬಾವಿಗಳಿಗೆ ಪಂಪ್‌ಸೆಟ್ ಸರಬರಾಜು ಆದೇಶ· ನೀಡಿದ್ದು, ಸಧ್ಯದಲ್ಲೆ ಸರಬರಾಜು ಮಾಡಿಸಿ, ಸರಬರಾಜಾದ ನಂತರ ವಿದ್ಯುದ್ದೀಕರಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಬೆಂಗಳೂರು:

2009 ರಿಂದ 2012 ನೇ ಸಾಲಿನವರೆಗೆ ಒಟ್ಟು 22 ಕೊಳವೆಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ (ಅನುಬಂಧ–2 ರಲ್ಲಿ ನೀಡಲಾಗಿದೆ)

ಅನುಬಂಧ–1

2011–12ನೇ ಸಾಲಿನಲ್ಲಿ ಹೊನ್ನಾಳಿ ತಾಲ್ಲೂಕಿನಲ್ಲಿ ಪರಿಶಿಷ್ಟ ಜಾತಿ ಫಲಾನುಭವಿಗಳಜಮೀನಿನಲ್ಲಿ ಕೊರೆಯಲಾದ ಕೊಳವೆಬಾವಿಗಳ ವಿವರ		
ಕ್ರ. ಸಂ.	ಫಲಾನುಭವಿಯ ಹೆಸರು ತಂದೆ/ಗಂಡನ ಹೆಸರು	ಗ್ರಾಮ
1	ಶಾಂತಿ ಬಾಯಿ ಕೋಂ ಸೇವ್ಯಾನಾಯ್ಕ	ಹೋಸಜೋಗ
2	ನಾಗರಾಜಪ್ಪ ಬಿನ್ ಚೀಲೂರಪ್ಪ	ಬೀರಗೊಂಡನಹಳ್ಳಿ
3	ನರಸಿಂಹಪ್ಪ ಬಿನ್ ಎ.ಕೆ.ಬಸಪ್ಪ	ಕ್ಯಾಸಿನಕೆರೆ
4	ನಿಂಗಪ್ಪ ಬಿನ್ ತಾಯಿ ರತ್ನಮ್ಮ	ಕೋಟೆಮಲ್ಲೂರು
5	ಪೂರ್ಯನಾಯ್ಕ ಬಿನ್ ಸೋಮ್ಲನಾಯ್ಕ	ಹೊಸಜೋಗ
6	ಪರಮೇಶ್ವರನಾಯ್ಕ ಬಿನ್ ಭೋಜ್ಯನಾಯ್ಕ	ಮಾಚಗೋಂಡನಹಳ್ಳಿ
7	ಸಿದ್ದಪ್ಪ ಬಿನ್ ಮರಿಹನುಮಂತಪ್ಪ	ಸಿಂಗಟಗೆರೆ
8	ಶ್ರೀಮತಿ ಲಕ್ಷ್ಮಮ್ಮ ಕೋಂ ಲಕ್ಷ್ಮಪ್ಪ	ಕ್ಯಾಸಿನಕೆರೆ
9	ಶ್ರೀಮತಿ ಕೆಂಚಮ್ಮ ಕೋಂ ಹನುಮಂತಪ್ಪ	ಕೋಟೆಮಲ್ಲೂರು
10	ಮಂಜನಾಯ್ಕ ಬಿನ್ ಸಾಮ್ಲನಾಯ್ಕ	ಸೋಮನಮಲ್ಲಾಪುರ
11	ಮಹೇಶ್‌ನಾಯ್ಕ ಬಿನ್ ಚಂದ್ರಾನಾಯ್ಕ	ಸೋಮನಮಲ್ಲಾಪುರ
12	ಗುಡ್ಡಪ್ಪ ಬಿನ್ ಗುಡ್ಡಪ್ಪ	ಗುಡ್ಡೆಹಳ್ಳಿ
13	ರಾಮಚಂದ್ರನಾಯ್ಕ ಬಿನ್ ಉಮ್ಲನಾಯ್ಕ	ಹೆಚ್.ಗೋಪಗೊಂಡನಹಳ್ಳಿ
14	ರಂಗಪ್ಪ ಬಿನ್ ನಿಂಬಪ್ಪ	ಹೆಚ್.ಗೋಪಗೊಂಡನಹಳ್ಳಿ
15	ಎ.ಕೆ.ಸಾವಿತ್ರಮ್ಮ ಕೋಂ ಬಸಪ್ಪ	ಗೋವಿನಕೋವಿ
16	ಎ.ಕೆ.ರಂಗಪ್ಪ ಬಿನ್ ಫತ್ರಪ್ಪ	ಸಿಂಗಟಗೆರೆ
17	ಎ.ಕೆ.ಹಾಲಪ್ಪ ಬಿನ್ ಮೈಲಾರಪ್ಪ	ಹಿರೇಬಾಸೂರು
18	ಎ.ಡಿ.ಹಾಲಪ್ಪ ಬಿನ್ ನರಸಪ್ಪ	ಒಡೆಯರ ಹತ್ತೂರು
19	ಕಾಳ್ಯನಾಯ್ಕ ಕನ್ಯಾನಾಯ್ಕ	ಮಾದಾಪುರ
20	ಕುಮಾರನಾಯ್ಕ ಬಿನ್ ಸೇವ್ಯಾನಾಯ್ಕ	ಫಲವನಹಳ್ಳಿ
21	ಕರಿಯನಾಯ್ಕ ಬಿನ್ ರಾಮಾನಾಯ್ಕ	ಚೀಲಾಪುರ
22	ಗಿರಿಜಾಬಾಯಿ ಕೋಂ ಮಂಜನಾಯ್ಕ	ಚೀಲಾಪುರ
23	ದೊಡ್ಡಪ್ಪ ಬಿನ್ ಗುಡ್ಡಪ್ಪ	ಜೀನಹಳ್ಳಿ
24	ದೊಡ್ಯನಾಯ್ಕ ಬಿನ್ ಲಿಂಬಾನಾಯ್ಕ	ಫಲವನಹಳ್ಳಿ

ಅನುಬಂಧ–2

ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಬೆಂಗಳೂರು

ವರ್ಷ	ಕಾಮಗಾರಿ ನಿರ್ವಹಿಸಿದ ಗುತ್ತಿಗೆದಾರರು	ಕೊರೆದಿರುವ ಕೊಳವೆ ಬಾವಿಗಳ ಸಂಖ್ಯೆ	ಪಂಪು ಮೋಟಾರು ಸರಬರಾಜು ವಿವರ	ವಿದ್ಯುತ್ ಸಂಪರ್ಕ ಕಲ್ಪಿಸಿರುವುದು
2009–10	ಮೆ:ಕೆ.ಪಿ.ಎಂ.ಬೋರ್‌ವೆಲ್ಸ್	19	19	14
2010–11	ಮೆ: ವೆಂಕಟೇಶ್ವರ ಟ್ಯೂಬ್‌ವೆಲ್ಸ್	18	18	8
2011–12	ಮೆ:ವೆಂಕಟೇಶ್ವರ ಟ್ಯೂಬ್‌ವೆಲ್ಸ್	7	–	0
	ಒಟ್ಟು	44	37	22

ಬಸ್ ವ್ಯವಸ್ಥೆ ಇಲ್ಲದಿರುವುದು

102 : (73)

ಶ್ರೀ ವೈ.ಎನ್.ರುದ್ರೇಶ್‌ಗೌಡ (ಬೇಲೂರು)

ಅ) ಬೇಲೂರು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಗ್ರಾಮೀಣ ಭಾಗಗಳಿಗೆ ಸೂಕ್ತ ಬಸ್ ವ್ಯವಸ್ಥೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಸ್ಥಳೀಯ ಶಾಸಕರು ಸಾರ್ವಜನಿಕರ ಕೋರಿಕೆಯಂತೆ ಬಸ್ ವ್ಯವಸ್ಥೆ (ರೂಟ್) ಮಾಡಲು ಕೋರಿದ್ದರೂ, ಸ್ಥಳೀಯ ನಿಗಮದ ಅಧಿಕಾರಿಗಳು ಯಾವುದೇ ಕ್ರಮ ತೆಗೆದುಕೊಂಡಿಲ್ಲದಿರುವುದು (ವಿಭಾಗ ನಿಯಂತ್ರಣಾಧಿಕಾರಿಗಳು) ಸರ್ಕಾರದವರ ಗಮನಕ್ಕೆ ಬಂದಿದೆಯೇ:

ಇ) ಇಂತಹ ಅಧಿಕಾರಿಗಳ ಮೇಲೆ ಸರ್ಕಾರವು ಏನು ಕ್ರಮ ತೆಗೆದುಕೊಂಡಿದೆ?